(ಶ್ರೀ ಎಚ್. ಎನ್. ನಂಜೇಗೌಡ)

ಗಳಿಗೆರ್ನಾ ನರ್ಕಾರದವರು ಉತ್ತರವನ್ನು ''ಷರ್ ಫರ್ನಿಷ್'' ಎಂದು ರೂಲಿನಲ್ಲಿ ಹೇಳಿದೆಯೇ ವಿನಾ ''ಮೇ ಫರ್ನಿಷ್''. ಎಂದೇನೂ ಹೇಳಿಲ್ಲ. ''ಮೇ ಫರ್ನಿಷ್''. ಎಂದು ಹೇಳಿದ್ದರೂ ಅದು 'ಷರ್' ಎಂತರೇ ಭಾವಿಸಬೇಕೆಂದು ವಿಧಿಯಲ್ಲಿ ಹೇಳಿದೆ. ನದಸ್ಯರು ಕಳುಹಿಸತಕ್ಕ ಪ್ರಶ್ನೆಗಳಿಗೆ 'ಆ್ಯಜ್ ಎ ಮ್ಯಾಟರ್ ಆಫ್ ಪ್ರೊಸೀಜರ್'. ನಚಿವರುಗಳು ನರಿಯಾದ ಉತ್ತರವನ್ನು ಕೊಡದೆ ತಪ್ಪಿರುದ್ಧವಾದ ಉತ್ತರಗಳನ್ನೂ ಕೊಡುತ್ತಿದ್ದಾರೆ. ನಾನು ಈ ನಭೆಗೆ ಚರ್ಚೆಮಾಡಲು ಉತ್ತರವನ್ನು ಕೋರಿ ನರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ಆ ಪ್ರಶ್ನೆ ನರ್ಕಾರದ ಇಬ್ಬರು ಮಂತ್ರಿಗಳು ಒಂದೇ ವಿಚಾರಕ್ಕೆ ನಂಬಂಧಪಟ್ಟ ವಿಷಯವೊಂದರ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿಯಾದ ಹೇಳಿಕೆಗಳನ್ನು ಪತ್ರಿಕೆಗಳಿಗೆ ಕೊಟ್ಟಿದ್ದಾರೆ. ಅವುಗಳಲ್ಲಿ ಯಾರದ್ದು ನರಿ ; ಯಾರದ್ದೂ ನರಿಯಲ್ಲ ಎಂದು ಕೇಳಿದ್ದೆ.

ಅಧ್ಯಕ್ಷರು.—ಆ ವಿಚಾರ ಈಗಾಗಲೇ ಇಡೀ ನಭೆಗೆರ್ನಾ ತಿಳಿದಿರತಕ್ಕದ್ದೇ ಆಗಿದೆ. ಅದನ್ನು ಮತ್ತೆ ಏಕೆ ಛಂಬಿನುವುದಕ್ಕೆ ಹೋಗುತ್ತಿದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ.—ಪತ್ರಿಕಾ ಪ್ರತಿನಿಧಿಗಳಿಗೆ ಕ್ಯಾಬಿನೆಟ್ಟಿನಲ್ಲಿ ಚಲನಚಿತ್ರಗಳಿಗೆ ನಹಾಯಧನವನ್ನು ನಿಲ್ಲಿನರಾಯಿತು ಎಂದು ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಆದರೆ ವಾರ್ತಾ ಇರಾಖೆಗೆ ನಂಬಂಧಪಟ್ಟ ಅಂದರೆ ಕೈಗಾರಿಕಾ ನಚಿವರಾದ ಶ್ರೀ ರಾಜಶೇಖರ ಮೂರ್ತಿಯವರು ಕ್ಯಾಬಿನೆಟ್ ಚಲನಚಿತ್ರಗಳಿಗೆ ನಹಾಯಧನವನ್ನು ನಿಲ್ಲಿನಬೇಕೆಂದು ತೀರ್ಮಾನವನ್ನು ಕೈಗೊಳ್ಳಲಿಲ್ಲ ಎನ್ನುವ ಅವರೊಂದು ಪತ್ರಿಕಾ ಹೇಳಿಕೆಯನ್ನು ನೀಡಿದ್ದಾರೆ. ಈ ಪತ್ರಿಕಾ ಹೇಳಿಕೆಗಳು ಯಾರೋ ಹಾದಿಬೀದಿಗಳಲ್ಲಿ ಹೋಗತಕ್ಕವರು ಹೇಳಿದಂಥವುಗಳಲ್ಲ. ಒಬ್ಬ ಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆ ಇನ್ನೊಬ್ಬ ಮಂತ್ರಿಗಳು ಕೊಟ್ಟಿರತಕ್ಕ ಹೇಳಿಕೆಗೆ ತದ್ವಿರುದ್ಧವಾಗಿದೆ. ಈ ಪ್ರಶ್ನೆಯ ನಂಬಂಧದಲ್ಲಿ ನಮಂಜಸವಾದ ಉತ್ತರವನ್ನು ಪಡೆಯತಕ್ಕ ಬಗ್ಗೆ ನಮಗೆ ರಕ್ಷಣೆ ನಿಗದೆ ನಮ್ಮ ಹಕ್ಕು ಪೊಚಕಾಗುವ ನಂಭವ ಉದ್ಭವಿನಿದೆ. ಆದರೆ ಅಧ್ಯಕ್ಷರು ಇಂಥ ವಿಚಾರಗಳಲ್ಲಿ ಯಾವಾಗ್ಯೂ ಬಹಳ ವಿಜಿರೆಂಟಾಗಿಯೇ ಇರುತ್ತಾರೆಂಬುದು ನನ್ನ ನಂಬುಗೆ. ತಾವು ದಯವಿಟ್ಟು ನಾನಾಗಲೇ ಹೇಳಿದ ರೂಲುಗಳನ್ನು ಮುರಿಯುವುದಕ್ಕೆ ಅವಕಾಶ ಕೊಡದಂತೆ ನರ್ಕಾರದವರಿಂದ ನಮಂಜಸವಾದ ಉತ್ತರವನ್ನು ಕೊಡಿನತಕ್ಕ ಬಗ್ಗೆ ನನ್ನ ಪ್ರಶ್ನೆಯನ್ನು ಮತ್ತೆ ನಾಳೆ ದಿನ ತೆಗೆದುಕೊಳ್ಳುವಂತೆ ಅಧ್ಯಕ್ಷರು ಆಜ್ಞೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The Chair always acts in accordance with the letter and spirit of the rules and the Chair does not concern itself with what one side or the other side feels about its interpretation. I am completely satisfied that the rules quoted have been complied with and there is no breach of the rules involved as suggested by the hon. Member. There is no force in the point of order.

Notices of Adjournment Motions about Scarcity Conditions etc., in the State

ಶ್ರೀ ಎಸ್. ಬಂಗಾರಪ್ಪ (ಸೊರಬ).—ನನ್ನದೊಂದು ಕ್ರಿಯಾಲೋಪ, ಸ್ವಾಮಿ. ಅಧ್ಯಕ್ಷರೇ, ನಾನು ಆಗಲೇ ಮಾತನಾಡಬೇಕೆಂದು ಎದ್ದು ನಿಂತೆ. ಆದರೆ ನನ್ನ ಮೈಕ್ ಕೆಟ್ಟಿತ್ತು. ನಾವು ಇಲ್ಲಿ ಮಾತನಾಡುವುದಕ್ಕೆ ಎದ್ದು ನಿಂತ ನಂತರ ಮೈಕ್ ಕನೆಕ್ಷನ್ ಕೊಡುತ್ತಾರಂತೆ. ಅದು ಸರಿಯಲ್ಲ. ಅಲ್ಲಿ ಕೆಲನಮಾಡತಕ್ಕವರಿಗೆ ಅಧ್ಯಕ್ಷರು ಯಾವಾಗ್ಲೂ ಇಲ್ಲಿಯ ಮೈಕ್ ಸರಿಯಾಗಿ ಕೆಲನಮಾಡುವಂತೆ ಸೂಚನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಾನು ನೋಮವಾರದ ದಿನವೇ ಆ ಎಕ್ಸ್‌ಪೋ-70ರ ಜೊತೆಯಲ್ಲೇ ಮತ್ತೊಂದು ನಿಲುವಳಿ ಸೂಚನೆಯನ್ನು ರಾಜ್ಯದಲ್ಲಿ ಉಂಟಾಗಿರತಕ್ಕ ಮಳೆ ಬೆಳೆಗಳ ಕ್ಷಾಮದ ವಿಚಾರವಾಗಿ ಕೊಟ್ಟಿದ್ದೇನೆ. ಅನೇಕ ಗ್ರಾಮಗಳಲ್ಲಿ ಈ ಮಳೆಗಾಲದಲ್ಲೇ ಕುಡಿಯುವುದಕ್ಕೆ ನೀರಿಲ್ಲ ಅನ್ನುತ್ತಿರುವಾಗ ಇನ್ನು

ಬೇಸಿಗೆ ಬಂದರೆ ಅಲ್ಲಿ ಕುಡಿಯುತಕ್ಕ ನೀರಿಗೇನು ಗತಿಯಾದೀತು ಅನ್ನುವುದನ್ನು ಊಹಿಸುವುದಕ್ಕೂ ಕೂಡ ಸಾಧ್ಯವಿಲ್ಲವಾಗಿದೆ. ಅದು ತಮಗೆ ಮುಟ್ಟಿರಬಹುದು. ಇದು ಬಹಳ ಅತಿ ಜರೂರಾದ ಹಾಗೂ ಸಾರ್ವಜನಿಕ ಪ್ರಾಮುಖ್ಯತೆಯುಳ್ಳಂಥ ವಿಚಾರ. ಆದ್ದರಿಂದ ಈ ಸಭೆ ಈ ವಿಚಾರವನ್ನು ಬಹಳ ತರಾತುರಿಯಿಂದ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ಸೂಚನೆ ಕೊಟ್ಟಿದ್ದೇನೆ. ಈ ವಿಷಯವನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಅನುಮತಿಗಾಗಿ ನಾನು ಕಾಯುತ್ತಿದ್ದೇನೆ.

MR. SPEAKER.—The hon. Member stood up saying that he wanted to raise a point of order. It is highly regrettable and most unfortunate that this provision is much abused and it is a matter for concern to the entire House relating to the point order. The entire House should cooperate with the Chair in seeing that this provision is propery made use of.

I have received a special motion under Rule 146 from the hon. Member Sri N. Hutchmasthi Gowda and some of his colleagues in which they want to discuss the scarcity conditions. I have also received a motion from the Government for the consideration of the same matter. I shall see which motion was received when and then I shall decide about that.

With respect to the matter raised by the hon. Member Sri Bangarappa in his adjournment motion, I think this is not a matter which can be raised as an adjournment motion. This scarcity is not coming up all of a sudden ; it is a continuous thing. There is also another point. Yesterday, one of the difficulties that we faced is, that adjournment motion could be considered only for 2 hours and it should be disposed of after that time. So, even if it is an admitted as adjournment motion, there will not be sufficient time for its discussion. Therefore, I am sorry I cannot give my consent to the notice of adjournment motion received from Sri Bangarappa.

The other question arises whether I am going to permit a discussion on this subject. I am going to permit it, but when and how much time is to be allowed is a matter for consideration. I shall place the matter before the Business Advisory Committee for decision as to how much time should be allotted for it. So, it is for consideration whether the discussion should be under Rule 146 or 279. We shall consider that matter. I am agreeable to permit discussion on that.

Withdrawal of a member

2-30 P.M.

ಶ್ರೀ ಪಾಟಾಳ್ ನಾಗರಾಜ್ (ಚಿಕ್ಕಪೇಜಿ).—ಸ್ವಾಮಿ, ರೂಲ್ ಪ್ರಕಾರವೇ ನಾನು ಒಂದು ನೋಟೀಸನ್ನು ಕಳುಹಿಸಿದ್ದೇನೆ. ಆ ನೋಟೀಸ್ ಏನು ಎಂದರೆ ಬಳ್ಳಾರಿ ಜಿಲ್ಲೆಗೆ ರಾಜ್ಯಪಾಲರು ಪ್ರವಾಸ ಹೊರಟಿರುವಾಗ ರಾಜ್ಯಪಾಲರ ಜೊತೆಯಲ್ಲಿ ಬೆಂಗಳೂರು ಪತ್ರಿಕೋದ್ಯೋಗಿಗಳೂ ಬರಬೇಕು ಎಂದು ವಾರ್ತಾ ಇಲಾಖೆಯವರು ಅವರನ್ನು ಕರೆದುಕೊಂಡು ಹೋದರು.

Mr. SPEAKER.—It is not a point of order and I warn the hon. Member not to persist in raising it. He has also given a call attention notice and it will come up before the House in due course.

* * * * * *

(*The hon. Member Sri Vatal Nagaraj was still standing*)

Mr. SPEAKER.—Will the hon. Member please resume his seat.

(*Hon. Member Sri Vatal Nagaraj continued to stand*)

I direct Sri Vatal Nagaraj to withdraw from the House immediately

(*Sri Vatal Nagaraj withdrew*)

Leader of the S. V. D. in the L. A.

†ಶ್ರೀ ಹೆಚ್. ಬಿ. ಜ್ಯಾಲನಯ್ಯ (ಹಾಸನ).—ಸ್ವಾಮಿ, ಈಗ ಒಂದು ವಿಷಯವನ್ನು ತಿಳಿಸುತ್ತೇನೆ. ಅದು ಏನೆಂದರೆ ನಿನ್ನೆ ದಿವಸ ಈ ಸಭೆಯಲ್ಲಿ ಸರ್ಕಾರದವರು ಜಪಾನ್ ಎಕ್ಸ್‌ಪೋ-70 ಬಗ್ಗೆ ಏನು ಒಂದು ನಿಯೋಗವನ್ನು ಕಳುಹಿಸಿದ್ದರೋ ಅದರಲ್ಲಿ ಶ್ರೀಮಾನ್ ಶಿವಪ್ಪನವರ ಮಗನೂ ಇದ್ದರು. ಇದರ ಬಗ್ಗೆ ಶ್ರೀಮಾನ್ ಶಿವಪ್ಪನವರು ಮಾತನಾಡತಕ್ಕಂಥ ಸಂದರ್ಭದಲ್ಲಿ ತಮ್ಮ ಮಗನು ಈ ನಿಯೋಗದಲ್ಲಿ ಸೇರಿರತಕ್ಕಂಥದ್ದರ ಬಗ್ಗೆ ಯಾವ ರೀತಿಯಾಗಿಯೂ ತಾವು ಜವಾಬ್ದಾರರಲ್ಲ ಎಂದು ಹೇಳಿದರು. ಮತ್ತು ಸರ್ಕಾರವೂ ಈ ನಿಯೋಗದಲ್ಲಿ ಅವರ ಮಗನನ್ನು ಸೇರಿಸಿ ಕಳುಹಿಸುವುದಕ್ಕೆ ಅವರಿಗೆ ಯಾವ ತಿಳುವಳಿಕೆಯನ್ನೂ ತಿಳಿಸದೆ ಇದ್ದರೂ ಕೂಡ ನಿನ್ನೆ ದಿನ ಶ್ರೀಮಾನ್ ಶಿವಪ್ಪನವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಅದರ್ಶವಾದ ರೀತಿಯಲ್ಲಿ ತಕ್ಷಣ ವಿರೋಧ ಪಕ್ಷದ ನಾಯಕತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ನಿಯೋಗದಲ್ಲಿ ತಮ್ಮ ಮಗ ಸೇರಿದ್ದರಿಂದ ನನ್ನ ವಿರೋಧಪಕ್ಷದ ನಾಯಕತ್ವಕ್ಕೆ ಅರ್ಹತೆ ಕಡಿಮೆ ಮಾಡುತ್ತದೆ ಎಂದು ಈ ಸಭೆಯಲ್ಲಿ ಕೂಡಲೇ ಅದಕ್ಕೆ ರಾಜೀನಾಮೆ ಕೊಟ್ಟಿದ್ದೇನೆ ಎಂದು ತಿಳಿಸಿದರು. ಸಂಯುಕ್ತ ವಿಧಾಯಕ ದಳದ ಪರವಾಗಿ ತಿಳಿಸುವುದು ಏನೆಂದರೆ ಈ ವಿಷಯದ ಬಗ್ಗೆ ಅವರು ಆದರ್ಶ ಮಾಡಿ ತೋರಿಸಿದರೂ ಆ ರಾಜೀನಾಮೆಯನ್ನು ನಾವು ಒಪ್ಪುವುದಿಲ್ಲ. ಅವರು ತಾತ್ಕಾಲಿಕವಾಗಿಯಾದರೂ ಈ ದಳದ ನಾಯಕರಾಗಿರಬೇಕು. ಎಸ್. ವಿ. ಡಿ. ಯವರು ಮತ್ತೊಮ್ಮೆ ಇದನ್ನು ಪರಿಶೀಲನೆ ಮಾಡಿ ತಾವು ತಾತ್ಕಾಲಿಕವಾಗಿಯಾದರೂ ಈ ಪಕ್ಷದ ನಾಯಕರಾಗಿರಬೇಕೆಂದು ನಾವು ಶಿವಪ್ಪನವರನ್ನು ಪ್ರಾರ್ಥನೆ ಮಾಡಿಕೊಂಡಿದ್ದರ ಮೇರೆ ಅವರು ಈ ಸಭೆಯಲ್ಲಿ ತಾತ್ಕಾಲಿಕವಾಗಿ ನಾಯಕರಾಗಿ ಇರುವುದಕ್ಕೆ ಒಪ್ಪಿಕೊಂಡಿದ್ದಾರೆಂದು ಎಸ್. ವಿ. ಡಿ. ಪರವಾಗಿ ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

Sri H. N. NANJE GOWDA.—I had given a notice under Rule 197 regarding the privilege.

Mr. SPEAKER.—Have you received any reply from the legislature Secretariat ?

Sri H. N. NANJE GOWDA.—I do not know.

****Matter not recorded as ordered by the Chair,

Mr. SPEAKER.—I shall read out the reply which will be sent to the hon. Member :

"As no material necessary for the fulfilment of the conditions for the purpose of admission of this motion is placed before me for coming to a decision, I regret I cannot extend my consent to the notice."

Tours of the Governor to Hadagali

Sri H. SIDDAVEERAPPA.—Sir, what I am saying is this. Just two days back, we read in papers with deep regret that some members of the Press whom we call the Fourth Estate in the country, were invited to go in connection with the Governor's tour in Hadagali, Bellary Dirict.

Mr. SPEAKER.—A similar call attention notice was given by Sri Vatal Nagaraj. I said that I have admitted it and it will come up before the House. I request the Government to a reply immediately so that I might place it tomorrow or at the earliest before the House.

Sri H. SIDDAVEERAPPA.—It is reported in the Press that the Deputy Minister was playing cards.....

Mr. SPEAKER.—That matter is also covered.

ಶ್ರೀ ಎಂ. ನಾಗಪ್ಪ.—ನಾನು ಒಂದು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದೆ. ತಮ್ಮ ಆಫೀಸಿನಿಂದ ನನಗೆ ಒಂದು ಪತ್ರ ಬಂದಿದೆ. ಅದರ ಬಗ್ಗೆ ಒಂದು ವಿಷಯವನ್ನು ತಮ್ಮ ಎದುರಿಗೆ ತರಬೇಕೆಂದಿದ್ದೇನೆ.

Mr. SPEAKER.—I will consider the point if the hon. Member meets me in my chamber.

ಶ್ರೀ ಬಿ. ಗಂಗಣ್ಣ.—ನನ್ನ ಮೊದಲನೆಯ ಕ್ರಿಯಾಲೋಪ, ಸದಸ್ಯರು ಎದ್ದು ತಮ್ಮ ಗಮನವನ್ನು ಸೆಳೆದರೂ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡದೆ ಇರುವುದಕ್ಕೆ ಕಾರಣವೇನು ?

ಎರಡನೆಯದು ಪತ್ರಿಕೆಗಳಲ್ಲಿ ಸಭೆಯ ನಡವಳಿಕೆಗಳು ಆಚ್ಚಾಗುವಾಗ ಕೆಲವು ಸದಸ್ಯರು ಕೇಳಿದ್ದಕ್ಕೆ ಸರ್ಕಾರ ಕೊಡುವ ಉತ್ತರಗಳು ಪೂರ್ಣವಾಗಿ ಬರುತ್ತವೆ. ಎಲ್ಲ ಸದಸ್ಯರನ್ನೂ ಒಂದೇ ಸಮನಾದ ದೃಷ್ಟಿಯಿಂದ ಪ್ರತಿಕೆಗಳವರು ನೋಡದೆ ಇರುವುದಕ್ಕೆ ಕಾರಣವೇನು ?

ಮೂರನೆಯದು ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದೆ. ಅದು ಏನಾಗಿದೆ ?

ಅಧ್ಯಕ್ಷರು.—ನಾನು ಎಲ್ಲ ಸದಸ್ಯರನ್ನೂ ಸಮನಾಗಿ ನೋಡುವುದಿಲ್ಲವೆಂದು ತಿಳಿದುಕೊಂಡಿದ್ದರೆ ಅದು ತಪ್ಪು. ಎಲ್ಲ ಕಡೆಯೂ ನೋಡುತ್ತಿದ್ದು ಯಾರು ನನ್ನ ದೃಷ್ಟಿಗೆ ಬೀಳುತ್ತಾರೆಯೋ ಅವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಸದಸ್ಯರ ಬಗ್ಗೆ ಯಾವ ರೀತಿಯ ತಾರತಮ್ಯವನ್ನೂ ಮಾಡುವುದಿಲ್ಲ.

ಮಾನ್ಯ ಸದಸ್ಯರ ಕಾಲಿಂಗ್ ಅಟೆನ್‌ಷನ್ ನೋಟೀಸ್ ಏನಾಗಿದೆ ಎಂದು ಈಗ ಹೇಳುವುದಕ್ಕಾಗುವುದಿಲ್ಲ. ಆಫೀಸಿನಲ್ಲಿ ವಿಚಾರಿಸಿ ಹೇಳಬೇಕಾಗುತ್ತದೆ.

Sri B. P. GANGADHAR.—I want to know from the Chair whether the Leader of the House can make a statement at any time with the

(SRI B. P. GANGADHAR)

permission of the Chair. There are severe charges levelled against the Government and the members of the Expo-70 party. The Government must make a statement regarding this. Can I request the Leader of the House through you to make a statement thrashing out all the matters.

Mr. SPEAKER.—I shall consider that point.

Sri B. P. GANGADHAR.—If they do not make a statement, it is presumed that they have conceded all the severe allegations made against them.

ಶ್ರೀ ಎಚ್. ಎನ್. ನಂಜೇಗೌಡ.—ತಮ್ಮ ಹುಕುಮಿನ ಬಗ್ಗೆ ಕಾಗದ ಈಗ ತಾನೇ ನನ್ನ ಟೇಬರ್ ಮೇಲೆ ಬಂದಿದೆ. ನಾನು ಎರಡು ಹಕ್ಕುಭಾಧ್ಯತಾ ಸೂಚನೆಗಳನ್ನು ಕೊಟ್ಟಿದ್ದೆ, ಒಂದು ಸರ್ಕಾರದ ವಿರುದ್ಧವಾಗಿ, ಇನ್ನೊಂದು ಹಣಕಾಸು ಹಾಗೂ ಯುವಜನ ಶಾಖೆಯ ಮಂತ್ರಿಗಳಾದ ರಾಮಕೃಷ್ಣ ಹೆಗ್ಗಡೆ ಅವರ ಬಗ್ಗೆ. ಇದರಲ್ಲಿ ಯಾವುದನ್ನು ರಿಜೆಕ್ಟ್ ಮಾಡಿದ್ದೀರೋ ಗೊತ್ತಿಲ್ಲ. ಒಂದಾದರೂ ಇರಬೇಕು ಎಂದು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ದಯವಿಟ್ಟು ನನ್ನ ಕೊಠಡಿಯಲ್ಲಿ ಭೇಟಿ ಮಾಡಿ, if there is anything I will consider.

Papers taid on the Table

SECRETARY.—I beg to lay on the Table of the House the Fourth List of Unstarred Questions and Answers of seventh Session.

UNSTARRED QUESTIONS AND ANSWERS

ಮಂಡ್ಯ ತಾಲ್ಲೂಕಿನಲ್ಲಿ ಕಟ್ಟಿರುವ ಹೊಸ ಕೆರೆಗಳು

5. ಶ್ರೀ ಬಿ. ದೊಡ್ಡಬ್ಯೈರೇಗೌಡ (ಶ್ರೀರಂಗಪಟ್ಟಣ).—

ನಣ್ಣ ನೀರಾವರಿ ರಾಜ್ಯ ಮಂತ್ರಿಗಳು ದಯವಿಟ್ಟು ಕೆಳಕಂಡ ವಿಷಯಗಳನ್ನು ತಿಳಿಸುವರೇ:—

(ಎ) ಮಂಡ್ಯಾ ತಾಲ್ಲೂಕು ದುದ್ದ ಹೋಬಳಿ ಮತ್ತು ಬನರಾಳು ಹೋಬಳಿಗಳಲ್ಲಿ ಪಿ.ಡಬ್ಯೂ.ಡಿ. ಇಲಾಖೆಯವರು 1961 ರಿಂದ 1969ರ ವರೆಏಗೂ ನಿರ್ಮಾಣ ಮಾಡಿರುವ ಹೊಸ ಕೆರೆಗಳ ಸಂಖ್ಯೆ ಎಷ್ಟು ;

(ಬಿ) ಸದರಿ ಕೆರೆಗಳು ಯಾವ ಯಾವ ಗ್ರಾಮಗಳಲ್ಲಿವೆ ;

(ಸಿ) ಪ್ರತಿ ಕೆರೆ ಕಟ್ಟಲು ಅಂದಾಜು ಮಾಡಿದ ಮೊಬಲಗೆಷ್ಟು ;

(ಡಿ) ಪ್ರತಿ ಕೆರೆಯಲ್ಲಿ ನೀರಾವರಿ ಆಗುವ ಕೆರೆಗಳ ವಿಸ್ತೀರ್ಣವೆಷ್ಟು ;

(ಇ) ಈ ಕೆರೆಗಳಿಗೆ ಮುಳುಗಡೆಯಾಗುವ ಪ್ರದೇಶದ ವಿಸ್ತೀರ್ಣವೆಷ್ಟು ; (ಎಕರೆವಾರು ಮಾಹಿತಿ ಕೊಡಬೇಕಾಗಿ ವಿನಂತಿ);

(ಎಫ್) ಮುಳುಗಡೆಯಾದ ಪ್ರದೇಶದ ಜನರಿಗೆ ಕೊಟ್ಟಿರುವ ಧನ ಸಹಾಯವೆಷ್ಟು ;